

ಚರ್ಮದ ಉತ್ಪನ್ನಗಳಿಗೆ ಬಹಳ ಹಿಂದಿನಿಂದಲೂ ಬೇಡಿಕೆ ಅಪಾರ. ಲೆದರ್ ಜಾಕೆಟ್, ಕೋಟ್, ವ್ಯಾಲೆಟ್ ಹಾಗೂ ಇತರ ಆ್ಯಸೆಸ್ಸರೀಸ್‌ಗಳು ಜನಪ್ರಿಯತೆ ಹಾಗೂ ದುಬಾರಿ... ಎರಡರಲ್ಲೂ ಮೇಲುಗೈ ಸಾಧಿಸಿದವು. ಲೆದರ್ ಲೆಹಂಗಾ ಸೇರಿದಂತೆ ಲೆದರ್ ಉಡುಪುಗಳು ಯುವತಿಯರ ಮನ ಗೆಲ್ಲುತ್ತಿದ್ದು, ಫ್ಯಾಷನ್ ಟ್ರೆಂಡ್ ಆಗಿಯೂ ಮಿಂಚುತ್ತಿದೆ.

■ ಆಶಾ ಕುಲಕರ್ಣಿ

# ಲೆದರ್ ಉಡುಪು ಹೊಸ ಟ್ರೆಂಡ್

ಚರ್ಮದ ಬ್ಯಾಗ್, ಚರ್ಮದ ಚಪ್ಪಲಿ, ಚರ್ಮದ ಜಾಕೆಟ್, ಕೋಟ್, ಚರ್ಮದ ವ್ಯಾಲೆಟ್... ಫ್ಯಾಷನ್ ಜಗತ್ತಿನಲ್ಲಿ ಚರ್ಮದ ಉತ್ಪನ್ನದ ಸಾಮ್ರಾಜ್ಯ ಕಾಲಿಟ್ಟು ಟ್ರೆಂಡ್ ಆಗಿ ಮೆರೆಯುತ್ತಿರುವುದು ಇಂದು ನಿನ್ನೆಯಲ್ಲ. ಆದರೆ ಚರ್ಮದ ಉಡುಪು ಮಾತ್ರ ಫ್ಯಾಷನ್‌ನೊಂದಿಗೆ ತಳುಕು ಹಾಕಿದ್ದು, ಹೊಸತನವನ್ನು ಮೆರೆದಿದ್ದು ಇತ್ತೀಚೆಗೆ. ಇದೀಗ ಚರ್ಮದ ಉಡುಪುಗಳು ಫ್ಯಾಷನ್ ಟ್ರೆಂಡ್ ಆಗಿ ಯುವತಿಯರ ಮನಸೆಳೆಯುತ್ತಿದೆ.

ಫ್ಯಾಷನ್ ಲೋಕ ಎಂದೆಂದೂ ನಿತ್ಯನೂತನ. ಇದರಲ್ಲಿ ಈಗ ಹೊಸ ಸೇರ್ಪಡೆ ಲೆದರ್ ಉಡುಪುಗಳು. ಚರ್ಮದ ಉತ್ಪನ್ನಗಳಿಗೆ ಫ್ಯಾಷನ್ ಲೋಕದಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಮೊದಲೆಲ್ಲಾ ಬರೀ ಪರ್ಸ್‌ಗಳಿಗೆ, ಬ್ಯಾಗ್‌ಗಳಿಗೆ, ಬೆಲ್ಟ್, ಶೂಗಳಿಗೆ ಉಪಯೋಗಿಸಲಾಗುತ್ತಿದ್ದ ಲೆದರ್ ಈಗ ಉಡುಪುಗಳ ಮುಖಾಂತರ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿದೆ.

ಸಾಮಾನ್ಯವಾಗಿ ಚಳಿಗಾಲದಲ್ಲಿ ದೇಹವನ್ನು ಬೆಚ್ಚಗಿರಿಸಲು ನಾವು ಲೆದರ್ ಜಾಕೆಟ್, ಲೆದರ್ ಕೋಟ್ ಮತ್ತು ಲೆದರ್ ಶೂಗಳನ್ನು ಧರಿಸುತ್ತೇವೆ. ಆದರೆ ಈ ಬಾರಿ ಲೆದರ್‌ನ ಉಡುಪುಗಳು ಮತ್ತು ಆಕ್ಸೆಸರಿಸ್‌ಗಳು ಶುಭ ಸಮಾರಂಭಗಳಿಗೆ ಧರಿಸಲು ಯೋಗ್ಯವಾದ ಹೊಸ ಲುಕ್ ಮತ್ತು ಹೊಸ ವಿನ್ಯಾಸದೊಂದಿಗೆ ಮಾರುಕಟ್ಟೆಯನ್ನು ಸೇರಿಕೊಂಡು ಹಂಗಾಮ ಎಬ್ಬಿಸಿವೆ.

### ಕ್ಲಾಸಿಕ್ ಲುಕ್

ಕ್ಲಾಸಿಕ್ ಲುಕ್‌ಗೆ ಇನ್ನೊಂದು ಹೆಸರೇ ಲೆದರ್. ಇದರಷ್ಟು ನುಣುಪಾದ ಮತ್ತು ರಿಚ್ ಲುಕ್ ಕೊಡುವ ಮೆಟೀರಿಯಲ್ ಇನ್ನೊಂದಿಲ್ಲ ಎನ್ನುವಷ್ಟರ ಮಟ್ಟಿಗೆ ಈ ಲೆದರ್ ಉಡುಪುಗಳು ಜನಪ್ರಿಯವಾಗಿವೆ. 80 90ರ ದಶಕದಲ್ಲಿ ಲೆದರ್ ಸ್ಕರ್ಟ್, ಪ್ಯಾಂಟ್ ಮತ್ತು ಲೆದರ್ ಜಾಕೆಟ್‌ಗಳು ಹೆಚ್ಚು ಜನಪ್ರಿಯವಾಗಿದ್ದವು. ಹಾಲಿ/ಬಾಲಿವುಡ್ ತಾರೆಯರಿಂದ ಹಿಡಿದು ಜನಸಾಮಾನ್ಯರವರೆಗೂ ಎಲ್ಲರ ನೆಚ್ಚಿನ ಉಡುಪಾಗಿದ್ದ ಲೆದರ್ ಉಡುಗೆಗಳು ಅಂದಿನ ಯುವತಿಯರ ವಾರ್ಡ್‌ರೋಬ್ ಕೂಡ ಅಲಂಕರಿಸಿದ್ದವು. ನಂತರದ ದಿನಗಳಲ್ಲಿ ಸ್ವಲ್ಪ ದಿನಗಳ ಮಟ್ಟಿಗೆ ಕಣ್ಮರೆಯಾಗಿದ್ದ ಈ ಲೆದರ್ ಉಡುಪುಗಳು ಇದೀಗ ಹೊಸ ವಿನ್ಯಾಸ, ಹೊಸ ರೂಪದೊಂದಿಗೆ ಮತ್ತೆ ಬಾಲಿವುಡ್ ಅಂಗಳಕ್ಕೆ ಕಾಲಿಟ್ಟಿದೆ.

ಇಂದಿನ ಸಿನಿಮಾ ತಾರೆಯರು, ಮಾಡೆಲಿಂಗ್‌ನವರು ಒಂದಿಲ್ಲೊಂದು ಪಾರ್ಟಿಗಳಲ್ಲಿ ಲೆದರ್ ಉಡುಪುಗಳನ್ನು ತೊಟ್ಟು ಮಿಂಚುತ್ತಿದ್ದಾರೆ. ಇದಿಷ್ಟೇ ಅಲ್ಲದೆ ಉಡುಪು ವಿನ್ಯಾಸಕಾರರು